4. ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಸಂಸ್ಥೆ ತಲಘಟ್ಟಪುರ

ನಿಬಂಧನೆಗಳು

ಪ್ರತಿ ವರ್ಷವೂ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದಿರಬೇಕು

ಅ) ಬಿಡುಗಡೆ ಮಾಡಲಾದ ಹಣವನ್ನು ನಿರ್ದಿಷ್ಟ ಯೋಜನೆಗಳಿಗೆ ಮಾತ್ರ ಉಪಯೋಗಿಸುವುದು.

ಆ) ಹಣವನ್ನು ಸಂಬಳ ಸಾರಿಗೆಗಳಿಗೆ ಉಪಯೋಗಿಸಬಾರದು.

ಇ) ಸಮಯಕ್ಕೆ ಸರಿಯಾಗಿ ಖರ್ಚಿನ ವಿವರಗಳನ್ನು ಬೆಲೆ ಸ್ಥಿರೀಕರಣ ನಿಧಿಗೆ ನೀಡಬೇಕು. ಪ್ರಗತಿಯನ್ನು ಪ್ರತಿ ಸಾರಿಯೂ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರಕ್ಕೆ ಒದಗಿಸಿ ಅದನ್ನು ವಿಸ್ತರಣಾ ಕಾರ್ಯಕ್ರಮದಲ್ಲಿ ಅಳವಡಿಸುವ ಬಗ್ಗೆ ವ್ಯವಸ್ಥೆ ಮಾಡಿ ಸದರಿ ಉಪಯೋಗವನ್ನು ರೇಷ್ಮೆ ಬೆಳಿಗಾರರಿಗೆ ತಲುಪುವಂತೆ ಮಾಡುವುದು.

3) ನಿರ್ದಿಷ್ಟ ಕಾರ್ಯಕ್ರಮಗಳಿಗೆ ಹಣವನ್ನು ಉಪಯೋಗಿಸಲಾಗಿದೆ.

ಸಾರ್ವಜನಿಕರಿಗೆ ಕಪ್ಪು ಮತ್ತು ಕೆಂಪು ಶಿಲೆ ನೀಡಲು ಸರ್ಕಾರವು ತೆಗೆದುಕೊಂಡ ಕ್ರಮ

647 - ಶ್ರೀ ಸಾದತ್ ಅಲೀಖಾನ್ (ಚನ್ನಪಟ್ಟಣ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕರಿಗೆ ಕಪ್ಪು ಮತ್ತು ಕೆಂಪು ಶಿಲೆ ನೀಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಆ) ಸಾರ್ವಜನಿಕರಿಗೆ ಕೆಂಪು ಮತ್ತು ಕಪ್ಪು ಶಿಲೆ ನೀಡಲು ಅನುಸರಿಸುವ ವಿಧಾನಗಳು?

ಇ) ಕಾರ್ಖಾನೆಯನ್ನು ಹೊಂದಿರುವವರಿಗೆ ಮಾತ್ರ ಕೆಂಪು ಮತ್ತು ಕಪ್ಪು ಶಿಲೆ ಮಂಜೂರು ಮಾಡುವ ಉದ್ದೇಶವೇನು?

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) :

ಅ) ಉಭಯ ಸದನಗಳ ಸಮಿತಿಯು ಇತ್ತೀಚೆಗೆ ಉಪಖನಿಜಗಳ ನೀತಿಯ ಮೇಲೆ ತನ್ನ ವರದಿಯನ್ನು ಸಲ್ಲಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೇಲೆ ಕಾಣಿಸಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಇ) ಮೇಲೆ ಕಾಣಿಸಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಹೊಸ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಮಾಡಿಕೊಂಡ ಅರ್ಜಿಗಳು ಹಾಗೂ ಕಂಪನಿಯಿಂದ ಅನುಮತಿಗಾಗಿ ಕಾದಿರುವ ಕಾರ್ಖಾನೆಗಳ ವಿವರ

471 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?